ನಗರ ನೀರುಸರಬರಾಜು ಮಂಡಲಿಯ ಮುಖಾಂತರ ಕುಡಿಯುವ ನೀರಿನ ಯೋಜನ ೮ ವರ್ಷಗಳ ಹಿಂದೆ ಮಂಜೂರಾಗಿದ್ದು ಇಷ್ಟರತನಕ ಕೆಲಸ ಪೂರ್ತಿಯಾಗಿಲ್ಲ. ಕೇವಲ ಹೊಳೆ (ನದಿ)ಯ ನೀರಿನ ಮೂಲವನ್ನು ಮಾತ್ರ ಅವಲಂಬಿಸಿ ಈ ಯೋಜನೆ ಮಾಡಲಾಗಿದೆ. ಮಾರ್ಚ್ ತಿಂಗಳ ನಂತರ ಇತ್ತೀಚೆನ ವರ್ಷಗಳಲ್ಲಿ ನದಿಯಲ್ಲಿ ನೀರು ಬತ್ತಿಹೋಗುತ್ತಿದೆ. ಆದ್ದರಿಂದ ನೀರು ಸಾಕಾಗದೆ ಬೇಸಿಗೆಯಲ್ಲಿ ಜನರಿಗೆ ಕುಡಿಯಲು ನೀರು ದೊರಕದೆ ಹೋಗಿದೆ. ಇಷ್ಟು ದೊಡ್ಡ ಯೋಜನೆಯನ್ನು ಮಾಡುವಾಗ ನೀರಿನ ಶಾಶ್ವತ ಮೂಲ ಹುಡುಕದೇ ಇರುವುದು ದೂರದೃಷ್ಟಿಯ ಕೊರತೆಯಾಗಿದೆ. ಈ ಯೋಜನೆ ಫಲಕಾರಿಯಾಗಲು ಅಲ್ಲದೆ ಜನರಿಗೆ ಶುದ್ಧನೀರು ದೊರಕಲು ಕನಿಷ್ಠ ಪಕ್ಷ 5 ಬೋರ್‌ವೆಲ್‌ಗಳನ್ನಾದರೂ ಕೊರೆದು ಜನರ ಬೇಡಿಕೆಗೆ ಆದ್ಯತೆ ಕೊಡಬೇಕಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ (ವಸತಿ ಹಾಗೂ ನಗರಾಭಿವೃದ್ಧಿ ಸಚಿವರು) :– ಮಾನ್ಯ ಅಧ್ಯಕ್ಷರೇ, ಬೆಳ್ತಂಗಡಿ ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆಯನ್ನು, ಈ ಪಟ್ಟಣದ ಹತ್ತಿರದಲ್ಲಿರುವ ಒಂದೇ ಒಂದು ನೀರಿನ ಮೂಲವಾದ ಬೆಳ್ತಂಗಡಿ ನದಿ (ಹೊಳೆ)ಯನ್ನು ಅವಲಂಬಿಸಿ 1985ರಲ್ಲಿ 22 ಲಕ್ಷ ರೂ.ಗಳ ಅಂದಾಜಿನಲ್ಲಿ ಮಂಜೂರು ಮಾಡಲಾಗಿದೆ. ಈ ಯೋಜನೆಯನ್ನು ನಂತರ 48.5 ಲಕ್ಷ ರೂ.ಗಳಿಗೆ ಜಲಶುದ್ಧೀಕರಣಾಗಾರ ಮತ್ತು ಇತರ ಕೆಲಸಗಳನ್ನು ಅಳವಡಿಸಿ ಮಾರ್ಪಡಿಸಲಾಗಿದೆ. ಈ ಯೋಜನೆಯ ಅಡಿಯಲ್ಲಿ ಜಲಶುದ್ಧೀಕರಣಾಗಾರ ಕಾಮಗಾರಿಯನ್ನು ಬಿಟ್ಟು ಉಳಿದೆಲ್ಲಾ ಕೆಲಸಗಳನ್ನೂ ಪೂರ್ಣಗೊಳಿಸಲಾಗಿದೆ. 30 ಅಶ್ವ ಶಕ್ತಿಯ ಎರಡು ಪಂಪುಗಳನ್ನು ಕಚ್ಚಾ ನೀರನ್ನು ಪಂಪು ಮಾಡಲು ಜೋಡಿಸಲಾಗಿದೆ. ಈ ಪಂಪನ್ನು ಚಾಲುಮಾಡಲು ವಿದ್ಯುತ್ ಸಂಪರ್ಕ ಕಲ್ಪಿಸಬೇಕಾಗಿದೆ. ಪುರಸಭೆ ಮತ್ತು ವಿದ್ಯುತ್ ಮಂಡಲಿಯವರು ವಿದ್ಯುತ್ ಸರಬರಾಜನ್ನು ಮಾಡಿದ ತಕ್ಷಣ ಪಂಪುಗಳನ್ನು ಚಾಲು ಮಾಡಲಾಗುವುದು. ಈ ಮಧ್ಯೆ ಜಲಶುದ್ಧೀಕರಣಗಾರ ಕಾಮಗಾರಿಯನ್ನು ಕೈಗೊಳ್ಳಲು ಟೆಂಡರುಗಳು ಬಂದಿದ್ದು, ಗುತ್ತಿಗೆದಾರರನ್ನು ಇಷ್ಟರಲ್ಲೇ ನೇಮಿಸಲಾಗುವುದು. ಬೇಸಿಗೆಯಲ್ಲಿ ನೀರಿನ ಕೊರತೆಯನ್ನು ನೀಗಿಸಲು ಕೆಲವು ಕೊಳವೆ ಬಾವಿಗಳನ್ನು ಕೊರೆದು ನೀರಿನ ವ್ಯವಸ್ಥೆಯನ್ನು ಉತ್ತಮಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.

2. ಬೆಂಗಳೂರು ನಗರದ ರಾಜಮಹಲ್ ವಿಲಾಸ ಬಡಾವಣೆ 2ನೇ ಹಂತದಲ್ಲಿ ಇರುವ ಸರ್ವೆ ನಂ. 21–3ಬಿ (ಗೆದ್ದಲಹಳ್ಳಿ) ಯಲ್ಲಿ ಅನಧಿಕೃತ ಕಟ್ಟಡ ಕಟ್ಟುತ್ತಿರುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ರಾಜಾಮಹಲ್ ವಿಲಾಸ ಬಡಾವಣೆ 2ನೇ ಹಂತದಲ್ಲಿರುವ ಜಮೀನು ಸರ್ವೆ ನಂ. 21ಬಿ, (ಗೆದ್ದಲಹಳ್ಳಿ) ಇದನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸ್ವಾಧೀನಪಡಿಸಿಕೊಂಡಿದ್ದು, ಇದರಲ್ಲಿ ಅನಧಿಕೃತ ಕಟ್ಟಡ ನಿರ್ಮಾಣ ಯಾವ ಅಡೆತಡೆ ಇಲ್ಲದೆ ನಡೆಯುತ್ತಿದ್ದು, ಈ ವಿಷಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರಿಗೆ ತಿಳಿದಿದ್ದರೂ ಸಹ ಇದನ್ನು ತಡೆಗಟ್ಟಲು ಯಾವುದೇ ಕ್ರಮವನ್ನೂ ತೆಗೆದುಕೊಳ್ಳದೇ ಇರುವ ಬಗ್ಗೆ ಪ್ರಸ್ತಾಪಿಸಲು ಅನುಮತಿ ಕೋರುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ (ವಸತಿ ಹಾಗೂ ನಗರಾಭಿವೃದ್ಧಿ ಸಚಿವರು) :– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ನೋಟೀಸಿಗೆ ಉತ್ತರವನ್ನೊದಗಿಸಲು ಸ್ವಲ್ಪ ಕಾಲಾವಕಾಶ ಬೇಕಾಗಿದೆ.

ಇಂಡಿ ತಾಲ್ಲೂಕಿನ ತಹಶೀಲ್ದಾರ್‌ರವರ ಅನುಚಿತ ವರ್ತನೆ ಬಗ್ಗೆ

ಡಾ॥ ಬಿ.ಆರ್. ಪಾಟೀಲ (ಸಿಂಧಗಿ) :– ಮಾನ್ಯ ಅಧ್ಯಕ್ಷರೇ, ಇಂಡಿಯ ತಹಶೀಲ್‌ದಾರರು, ಶಾಸಕರು ಹಾಗೂ ಜನಸಾಮಾನ್ಯರ ಬಗ್ಗೆ ಬಹಳ ಅನುಚಿತವಾಗಿ ವರ್ತಿಸುತ್ತಾ ಇದ್ದಾರೆ. ತಾವು ಸರಕಾರಕ್ಕೆ ಹಣ ಕೊಟ್ಟು ಸ್ಥಳ ಅಲಂಕರಿಸಿದ್ದಾಗಿ ಹೇಳಿಕೊಳ್ಳುತ್ತಾ ಮುಗ್ಧ ಜನರನ್ನು ಸುಲಿಯುತ್ತಿದ್ದಾರೆ. ಅದಲ್ಲದೆ ಅವರು ಕೆಲವೊಂದು ಮಧ್ಯವರ್ತಿಗಳನ್ನು ನಿಯಮಿಸಿದ್ದಾರೆ. ಹಾಗೂ ಸಾರ್ವಜನಿಕರು ತಮ್ಮ ಕೆಲಸವಾಗ ಬೇಕೆದ್ದಲ್ಲಿ ಆ ಮಧ್ಯವರ್ತಿಗಳ ಮುಖಾಂತರವೇ ಬರಬೇಕು ಹಾಗೂ ಅವರು ಹೇಳಿದಷ್ಟು ಹಣ ತೆತ್ತಬೇಕು. ನಾನೂ ಕೂಡ 15 ದಿವಸಗಳ ಹಿಂದೆ ಒಂದು ಸಾಮಾನ್ಯ ಕೆಲಸದ ಸಲುವಾಗಿ ನಮ್ಮ ಕಾರ್ಯಕರ್ತನಿಗೆ ಪತ್ರಕೊಟ್ಟು ಕಳುಹಿಸಿದ್ದೆ. ಆ ಪತ್ರವನ್ನು ನೋಡದೆ ಹರಿದುಹಾಕಿ, ನಿನ್ನ ಕೆಲಸವಾಗಬೇಕಾದರೆ ಶಾಸಕರ ಪತ್ರ ತರಬೇಡ ಹಾಗೂ ಹಣಕೊಟ್ಟರೆ ಮಾತ್ರ ಕೆಲಸ ಮಾಡುತ್ತೇನೆಂದು ಖಡಾಖಂಡಿತವಾಗಿ ಹೇಳಿದ್ದಾರೆ. ಶಾಸಕರಿಗೇ ಈ ಪಾಡಾದರೆ ಜನಸಾಮಾನ್ಯರ ಪಾಡೇನು?